PW-13
CW-9

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC No.177/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಪ್ಪ |
| ತಂದೆಯ/ಗಂಡನ ಹೆಸರು | : | ಪಕ್ಕೀರಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಮುಗಳಗೇರಿ, ಶಿಕಾರಿಪುರ ತಾಲ್ಲೂಕು |

ಪಿ.ಡಬ್ಲ್ಯೂ 13

ಸಿ.ಡಬ್ಲ್ಯೂ 9

ದಿ: 01-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ಅಕ್ಕ. ಚಾಸಾ-2 ರಿಂದ 8 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ನನ್ನ ತಂಗಿ ಗಂಡ. 2 ನೇ ಆರೋಪಿಯು 1 ನೇ ಆರೋಪಿಯ ತಾಯಿ. ಮೃತ ರಾಮಪ್ಪ ನನ್ನ ಅಕ್ಕನ ಗಂಡ ಅಂದರೆ ಮಾವ. ಆರೋಪಿ ಮತ್ತು ದೂರುದಾರರು ಕಾಡಜ್ಜಿಯಲ್ಲಿ ಅಕ್ಕಪಕ್ಕದ ಮನೆಯವರಾಗಿರುತ್ತಾರೆ. ಮೃತರ ಮನೆ ಹಾಗೂ ಆರೋಪಿ ಮನೆ ಅಕ್ಕಪಕ್ಕ ಇತ್ತು. ನಿವೇಶನದ ವಿಚಾರವಾಗಿ ಅವರ ನಡುವೆ ಗಲಾಟೆ ಆಗುತ್ತಿತ್ತು. ಮೃತ ರಾಮಪ್ಪ ಈ ವಿಚಾರವನ್ನು ನನಗೆ ಹೇಳಿದ್ದರು. ಒಂದೆ ಮನೆಯವರು ಇರುವುದರಿಂದ ಇಬ್ಬರೂ ಹೊಂದಿಕೊಂಡು ಹೋಗಿ ಎಂದು ನಾನು ಬುದ್ದಿವಾದ ಹೇಳಿದ್ದೆ.

2. ದಿನಾಂಕಃ 12-06-2016 ರಂದು 1 ಮತ್ತು 2 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯ್ದು ನೀನು ಹೇಗೆ ಬದುಕುತ್ತೀಯಾ ಅಂತ ಹೀನಾಮಾನವಾಗಿ ಬೊಳಿ ಮಗನೇ, ನಿನ್ನ ತಾಯಿನಾಡ,

PW-13
CW-9

ಎಂದು ಬೈದರು. ಇದಾದ ನಂತರ ಮೃತ ರಾಮಪ್ಪ ಮನೆಯಲ್ಲಿ ಇದ್ದ ಕ್ರಿಮಿನಾಶಕವನ್ನು ಕುಡಿದರು. ವಿಷಯ ತಿಳಿದ ಕೂಡಲೇ ನಾವು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ತದ ನಂತರ ಅವರು ಮೃತಪಟ್ಟಿರುತ್ತಾರೆ. ಆರೋಪಿರೇ ಅವರ ಸಾವಿಗೆ ಕಾರಣಕರ್ತರಾಗಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ .ಐ ಕೆ , ವಕೀಲರಿಂದ 1 ನೇ ಆರೋಪಿತರ ಪರವಾಗಿ**:

3. ಗಲಾಟೆ ಆಗುವ ವಿಷಯ ಕುರಿತು ನಾನು ಅವರಿಗೆ ದೂರು ಕೊಡಲು ಹೇಳಿಲ್ಲ. ಯಾವುದೆ ಸೈಟಿನ ವಿಚಾರವಾಗಿ ದೂರುದಾರರು ಮತ್ತು ಆರೋಪಿತರ ನಡುವೆ ಗಲಾಟೆ ಆಗುತ್ತಿರಲಿಲ್ಲ ಎಂದರೆ ಸುಳ್ಳು. ನಾನು ಶಿಕಾರಿಪುರದ ವಾಸಿ. ಅದು ದಾವಣಗೆರೆಯಿಂದ 150 ಕಿ ಮೀ ಅಂತರದಲ್ಲಿ ಇದೆ. ನಾನು ಹೇಳಿದ ಘಟನೆ ನಡೆದ ದಿನ ನಾನು ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅವಾಚ್ಯ ಶಬ್ದಗಳಿಂದ ಮೃತ ರಾಮಪ್ಪರವರಿಗೆ ಬೈದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ದೂರು ಕೊಡಲು ನಾನು ಹೇಳಿಲ್ಲ. ಹೊಂದಿಕೊಂಡು ಹೋಗಿ ಎಂದು ನಾನು ಗಲಾಟೆ ನಡೆದಿಲ್ಲ ಆದ್ದರಿಂದ ನಾನು ದೂರು ಕೊಡಲು ಹೇಳಿಲ್ಲ ಎಂದರೆ ಸರಿಯಲ್ಲ. ಮೃತ ರಾಮಪ್ಪರವರ ಸಾವಿಗೆ ಆರೋಪಿತರೇ ಕಾರಣರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW-13
CW-9